ಒ ಎಸ್ ನಂ. 05/2020 ಪಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಸುಲೋಚನ

ದಿನಾಂಕ 14-01-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯ ಪ್ರತಿಜ್ಞಾಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯವೆಲ್ಲಾ ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದೆಂದು ಪ್ರಮಾಣಿಸಿ ಹೇಳಿರುತ್ತಾರೆ.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಎಸ್ ಡಿ ವಕೀಲರಿಂದ,

1) ದಿನಾಂಕ 2/11/2017 ರಂದು ಪ್ರತಿವಾದಿ ನನಗೆ ಬರೆದುಕೊಟ್ಟ ಕ್ರಯದ ಕರಾರು ಪತ್ರದ ಮೂಲ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಹಾಜರಿದ್ದು ಸದರಿ ಪತ್ರವನ್ನು ಸಾಕಷ್ಟು ಮುಖ ಬೆಲೆಗೆ ಸ್ಟಾಂಪ ಪೇಪರ್ ಬರೆದಿಲ್ಲವೆಂದು ತಕರಾರು ಮಾಡಿರುತ್ತಾರೆ. ಪ್ರತಿವಾದಿ ಪರ ವಕೀಲರು ಈ ವ್ಯವಹಾರದ ಬೆಲೆಯು ರೂ.5,50,000/- ಗಳಾಗಿದ್ದರಿಂದ ರೂ. 500/- ಮುಖಬೆಲೆ ಸ್ಟಾಂಪ್ ಪೇಪರನ್ನು ಈ ದಾಖಲೆಯನ್ನು ಬರೆಯಬೇಕೆಂದು ತಕರಾರು ಮಾಡಿರುತ್ತಾರೆ. ಆದ್ದರಿಂದ ಸದರಿ ದಾಖಲೆಯು ಸಾಕಷ್ಟು ಮುಖಬೆಲೆಯ ಸ್ಟಾಂಪ್ ಪೇಪರ ಮೇಲೆ ಬರವಣಿಗೆ ಆಗಿರದ ಕಾರಣ ಅದನ್ನು ಗುರುತಿಸಿರುವುದಿಲ್ಲ.

2) ದಿನಾಂಕ 23/01/2018 ರಂದು ಪ್ರತಿವಾದಿಯು ನೀಡಿದ ನೋಟೀಸಿನ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 1 ಎಂದು,

3) ಸದರಿ ನೋಟೀಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೋರಿಕೊಳ್ಳುತ್ತೇನೆ

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಕೋರಿರುತ್ತಾರೆ. ಆದರೆ ಪ್ರತಿವಾದ ಪತ್ರ ಸಲ್ಲಿಸಿದ ಕಾರಣ ಅವರ ಪರ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.